**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ.ಸಿ.ನಂಃ 1030/2023**

**ಫಿರ್ಯಾದುದಾರರು:** ಸರಕಾರದ ಪರವಾಗಿ,
ಭಟ್ಕಳ ಗ್ರಾಮೀಣ ಪೋಲಿಸ್ ಠಾಣೆ, ಭಟ್ಕಳ.

**- ವಿರುದ್ಧ -**

**ಆರೋಪಿತರು:**

1. ಶ್ರೀ.ಇಬ್ರಾಹಿಂ ಖಲೀಲ್ ಇಸ್ಮಾಯಿಲ್ ಶೇಖ್ ಖಲೀಲ್
ವಯಸ್ಸುಃ 29 ವರ್ಷ, ವೃತ್ತಿಃ ವ್ಯವಹಾರ,
ಸಾಃ ಚರ್ಚ್ ಕ್ರಾಸ್, ಮುಗಳಿಹೊಂಡಾ, ಭಟ್ಕಳ.

2. ಶ್ರೀ. ಹಸನ್ ಅಖದಸ್ ತಂದೆಃ ಅಬುಬಕರ್ ದಾಮುದಾ,
ವಯಸ್ಸುಃ 21 ವರ್ಷ, ವೃತ್ತಿಃ ವಿದ್ಯಾರ್ಥಿ,
ಸಾಃ ಚರ್ಚ್ ಕ್ರಾಸ್, ಮುಗಳಿಹೊಂಡಾ, ಭಟ್ಕಳ.

**ಃ ದೋಷಾರೋಪಣೆ ಃ**

ಶ್ರೀಮತಿ.ಧನವತಿ. ಬಿ.ಎ.,(ಲಾ)ಎಲ್‌ಎಲ್‌ಬಿ., ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿ, ಭಟ್ಕಳ ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ಭಟ್ಕಳ ಗ್ರಾಮೀಣ ಪೋಲಿಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಭಟ್ಕಳದ ತೆಂಗಿನಗುಂಡಿ ಎನ್ ಎಚ್ -66 ರಸ್ತೆಯ ಅಲ್ಮಿನಾ ರಸ್ತೆ ಕ್ರಾಸ್ ಹತ್ತಿರ ಆರೋಪಿತರಾದ ನೀವುಗಳು ದಿನಾಂಕಃ 15/06/2021 ರಂದು ಬೆಳಿಗ್ಗೆ 05.30 ಗಂಟೆಯ ಸಮಯಕ್ಕೆ ಟಾಟಾ ಏಸ್ ವಾಹನ ಸಂಖ್ಯೆಃ ಕೆಎ-17/ಸಿ-6813 ನೇದರಲ್ಲಿ ಸುಮಾರು 50,000/-ರೂಪಾಯಿ ಬೆಲೆಯ 2 ಕೋಣಗಳನ್ನು ಕಟ್ಟಿ ವಧೆ ಮಾಡುವ ಉದ್ದೇಶದಿಂದ ಚೌಥನಿ ಕಡೆಯಿಂದ ಜಾಮಿಯಾಬಾದ ಕಡೆಗೆ ಸಾಗಾಟ ಮಾಡುವ ಮೂಲಕ ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣ ಕಾಯಿದೆ, 2020ರ ಕಲಂ 12 ಸಹವಾಚಕ ಕಲಂ 4,5,7 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಎರಡನೇಯದಾಗಿ ಅದೇ ದಿನಾಂಕ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ ಆರೋಪಿತರಾದ ನೀವು, 2 ಕೋಣಗಳನ್ನು ನೀರು ಹುಲ್ಲು ಕೊಡದೆ ನಾಲ್ಕು ಕಾಲುಗಳನ್ನು ಹಿಂಸಾತ್ಮಕವಾಗಿ ಕಟ್ಟಿ ಹಾಕಿ ಟಾಟಾ ಏಸ್ ವಾಹನದಲ್ಲಿ ತೆಗೆದುಕೊಂಡು ಹೋಗಿ ಜಾನುವಾರಗಳಿಗೆ ಹಿಂಸೆ ನೀಡಿ ಆ ಮೂಲಕ 1960ರ ಪ್ರಾಣಿಗಳ ಮೇಲಿನ ದೌರ್ಜನ್ಯ ತಡೆ ಕಾಯಿದೆ ಕಲಂ. 11(1) ಮತ್ತು (ಡಿ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಕೊನೇಯದಾಗಿ ಅದೇ ದಿನಾಂಕ, ಅದೇ ಸಮಯ ಮತ್ತು ಅದೇ ಸ್ಥಳದಲ್ಲಿ ಆರೋಪಿತರಾದ ನೀವು ಗಳು ಸುಮಾರು 50,000/- ರೂಪಾಯಿ ಮೌಲ್ಯದ 2 ಕೋಣಗಳನ್ನು ಟಾಟಾ ಏಸ್ ವಾಹನ ಸಂಖ್ಯೆ: ಕೆಎ-17/ಸಿ-6813 ನೇದರಲ್ಲಿ ತುಂಬಿಕೊಂಡು ಯಾವುದೇ ಪಾಸ್ ಯಾ ಪರವಾನಿಗೆ ಇಲ್ಲದೇ ಸಾಗಾಟ ಮಾಡಿ, ಆ ಮೂಲಕ ಕಲಂ 192 ಮೋಟಾರು ವಾಹನ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು , ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಸಹಿ ಇದೆ/-

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು
ನ್ಯಾಯಿಕ ದಂಡಾಧಿಕಾರಿ, ಭಟ್ಕಳ.

ದಿನಾಂಕಃ 10-06-2024.

ಹೆಚ್ಚುವರಿ **ಸಿವಿಲ್ ಜಡ್ಜ ಮತ್ತುನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ.ಸಿ.ನಂಃ 1030/2023**

**ಫಿರ್ಯಾದುದಾರರು:** ಸರಕಾರದ ಪರವಾಗಿ,
ಭಟ್ಕಳ ಗ್ರಾಮೀಣ ಪೋಲಿಸ್ ಠಾಣೆ, ಭಟ್ಕಳ.

**– ವಿರುದ್ಧ –**

**ಆರೋಪಿತರು:** 1. ಶ್ರೀ.ಇಬ್ರಾಹಿಂ ಖಲೀಲ್ ಇಸ್ಮಾಯಿಲ್ ಶೇಖ್ ಖಲೀಲ್

**: ಆರೋಪಣೆ :**

ಪ್ರಶ್ನೆ –1ಃ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿದ್ದೀರಾ ?

ಉತ್ತರ – ಹೌದು

ಪ್ರಶ್ನೆ –2ಃ ತಪ್ಪೊಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ ?

ಉತ್ತರ – ಇಲ್ಲ. ವಿಚಾರಣೆಯಾಗಬೇಕು.

(ಆರೋಪಿತರಿಗೆ ತಿಳಿದಿರುವ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದ್ರಿ ಆರೋಪಿತರು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸಿರುತ್ತೇನೆ.)

ಸಹಿ ಇದೆ/

ದಿಃ 10–06–2024

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು
ನ್ಯಾಯಿಕ ದಂಡಾಧಿಕಾರಿ, ಭಟ್ಕಳ.

**ಹೆಚ್ಚುವರಿ ಸಿವಿಲ್ ಜಡ್ಜ ಮತ್ತುನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ.ಸಿ.ನಂಃ 1030/2023**

**ಫಿರ್ಯಾದುದಾರರು:** ಸರಕಾರದ ಪರವಾಗಿ,
ಭಟ್ಕಳ ಗ್ರಾಮೀಣ ಪೋಲಿಸ್ ಠಾಣೆ, ಭಟ್ಕಳ.

**– ವಿರುದ್ಧ –**

**ಆರೋಪಿತರು:** 2. ಶ್ರೀ. ಹಸನ್ ಅಖದಸ್ ತಂದೆಃ ಅಬುಬಕರ್ ದಾಮುದಾ,

**: ಆರೋಪಣೆ :**

ಪ್ರಶ್ನೆ –1ಃ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿದ್ದೀರಾ ?

ಉತ್ತರ – ಹೌದು

ಪ್ರಶ್ನೆ –2ಃ ತಪ್ಪೊಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆನ್ನುವಿರೋ ?

ಉತ್ತರ – ಇಲ್ಲ. ವಿಚಾರಣೆಯಾಗಬೇಕು.

(ಆರೋಪಿತರಿಗೆ ತಿಳಿದಿರುವ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದ್ರಿ ಆರೋಪಿತರು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತೆಂದು ದೃಢೀಕರಿಸಿರುತ್ತೇನೆ.)

ಸಹಿ ಇದೆ/

ದಿಃ 10–06–2024

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು
ನ್ಯಾಯಿಕ ದಂಡಾಧಿಕಾರಿ, ಭಟ್ಕಳ.